## ಶಾಸ್ತ್ರಿ ಬಳಸಿದ ಬ್ಯಾಡ್ಮಿಂಟನ್ ರಾಕೆಟ್

ಭಾರತ ದೇಶ ಕಂಡ ಅತ್ಯಂತ ಸರಳ, ಪ್ರಾಮಾಣಿಕ ಮತ್ತು ನಿಷ್ಠಾವಂತ ಪ್ರಧಾನ ಮಂತ್ರಿಗಳೆಂದರೆ ಅದು ಲಾಲ್ ಬಹದ್ದೂರ್ ಶಾಸ್ತ್ರೀಜಿ. ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಅವರು, ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿಗಳಾಗಿ ಮಾಡಿದ ಸುಧಾರಣೆಗಳು ಅಪರಿಮಿತ. ಅವರ ಪ್ರಾಮಾಣಿಕತೆಗೆ ಸಾಕಷ್ಟು ನಿದರ್ಶನಗಳಿವೆ. ಇಂತಹ ಆದರ್ಶ ವ್ಯಕ್ತಿತ್ವದ ಪ್ರಧಾನ ಮಂತ್ರಿಗಳು ವಾಸವಾಗಿದ್ದ ದೆಹಲಿಯ ಮನೆಯನ್ನು ಇದೀಗ ಮ್ಯೂಸಿಯಂ ಆಗಿ ಪರಿವರ್ತಿಸಲಾಗಿದೆ. ಇದರಲ್ಲಿ ಲಾಲ್ ಬಹದ್ದೂರ್ ಶಾಸ್ತ್ರೀ ಅವರು ಬಳಸಿದ್ದ ಹಲವಾರು ಪರಿಕರಗಳನ್ನು ಸಂರಕ್ಷಿಸಿ ಇಡಲಾಗಿದೆ. ಮ್ಯೂಸಿಯಂನ ಒಳಗೆ ಕಾಲಿಡುತ್ತಿದ್ದಂತೆ ಪುಳಕಗೊಂಡ ನಮ್ಮ ಕಣ್ಣಿಗೆ ಬಿದ್ದದ್ದೆ ಈ ಬ್ಯಾಡ್ಮಿಂಟನ್ ರಾಕೆಟ್. ಅವರ ಕ್ರಿಯಾಶೀಲತೆ, ಸರಳತೆ ಮತ್ತು ಕ್ರೀಡಾಸಕ್ತಿಯ ಸಂಕೇತ ಈ ಬ್ಯಾಡ್ಮಿಂಟನ್ ರಾಕೆಟ್ ಎಂಬ ಶಿರೋನಾಮೆ ಅತ್ಯಂತ ಸೂಕ್ತವಾಗಿದೆ.

–ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟೆ



## ನುಡಿ ಬಳ್ಳಿ ಚೌಕಟ್ಟು

ಕನ್ನಡ ಭಾಷೆಯ ಒಲವು ಉಸಿರಿನಲ್ಲಿ ಬೆರೆತಾಗ ಎಂತಹ ವಿಸ್ಮಯಗಳು ಘಟಿಸುತ್ತವೆ ಎಂದು ಹೇಳುವುದು ಕಷ್ಟಸಾಧ್ಯ. ಮೊದಲ ನೋಟಕ್ಕೆ ಇದೊಂದು ತಾಯಿ ಭುವನೇಶ್ವರಿಯ ಸಾಧಾರಣ ಚಿತ್ರ ಅನ್ನಿಸಿದರೂ, ಚಿತ್ರವನ್ನು ಹಿಗ್ಗಿಸಿ ನೋಡಿದಾಗ ಅದು ಒಳಗೊಂಡಿರುವ ವಿವರಗಳು ಮತ್ತು ಅವುಗಳನ್ನು ಹೆಣೆದಿರುವ ರೀತಿ ಹೆಮ್ಮೆಯಿಂದ ಎದೆ ಉಬ್ಬುವಂತೆ ಮಾಡುತ್ತವೆ. ಕನ್ನಡದ ಅಕ್ಷರಮಾಲೆ, ಕನ್ನಡದ ಅಂಕಿಗಳು, ಕನ್ನಡ ನಾಡನ್ನು ಆಳಿದ ರಾಜವಂಶಗಳ ವಿವರ, ಕನ್ನಡ ಕಾವ್ಯಗಳನ್ನು ಚೌಕಾಕಾರದಲ್ಲಿ ಸುಂದರವಾಗಿ ಬರೆಯಲಾಗಿದೆ.



ಕದಂಬರಿಂದ ಹಿಡಿದು ಕೆಳದಿಯ ನಾಯಕರವರೆಗಿನ ರಾಜ ಲಾಂಛನಗಳನ್ನೂ ಇಲ್ಲಿ ಬಿಡಿಸಲಾಗಿದೆ. ಕನ್ನಡ ಲಿಪಿಯನ್ನು ವರ್ಣಿಸುವಾಗ ಕವಿ ಹೇಳಿದ 'ಎಂಥ ಚೆಂದದ ಬಳ್ಳಿ ಚೆಲ್ಲವರಿದಿಹುದಿಲ್ಲಿ' ಎಂಬ ನುಡಿ ನೆನಪಿಸುವ ಈ ಚಿತ್ರ ಬೆಂಗಳೂರಿನ ನಿವಾಸಿ ದೀಪ್ತಿ ನಿಖಿಲೇಂದ್ರ ಜೈನ್ ಅವರ ಕೈಚಳಕದಿಂದ ಮೂಡಿದ್ದು.

–ವಾ. ಮುರಳೀಧರ, ತೀರ್ಥಹಳ್ಳಿ



## ಮನೆ ಮನೆಗೆ 'ಹೂವಿನಕೋಲು'

ಜನರಿಗೆ ಕಲೆ ಪರಿಚಯವಾಗಬೇಕು, ಕಲೆ ಬೆಳೆಯಬೇಕು, ಯಾವುದಾದರೂ ನೆಪದಲ್ಲಿ ಜನರಿಗೆ ಆಪ್ತವಾಗಬೇಕು. ಪೌರಾಣಿಕ ಕಥಾನಕಗಳನ್ನೇ ಆಯ್ದುಕೊಂಡು, ಹಾಡು, ಅರ್ಥಗಾರಿಕೆ ಮತ್ತು ಕುಳಿತಲ್ಲೇ ಕಲಾವಿದರು ಕೋಲು ಹೊಡೆಯುವ ಮೂಲಕ ಜನರಿಗೆ ಮನರಂಜನೆ ನೀಡುವ ಜನಪದ ಕಲೆಯೇ 'ಹೂವಿನಕೋಲು'. ರಾಜ್ಯದ ಕರಾವಳಿ ಭಾಗದಲ್ಲಿ ಮಾತ್ರವಲ್ಲದೆ ಉತ್ತರ ಕನ್ನಡ ಜಿಲ್ಲೆಯಲ್ಲೂ ಈ ಕಲೆ ಸದ್ದು ಮಾಡುತ್ತಿದೆ. ವಿಶೇಷವಾಗಿ ಮಕ್ಕಳು ಮತ್ತು ಮನೆಯ ಹಿರಿಯ ಸದಸ್ಯರನ್ನು ಆಕರ್ಷಣೆ ಮಾಡುವಲ್ಲಿ ಮನೆ ಮನೆ ಭೇಟಿಯ ಹೂವಿನಕೋಲು ಕಲಾತಂಡ ಯಶಸ್ಸು ಕಾಣುತ್ತಲಿದೆ.

ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಕಲಾವಿದ ಶ್ರೀಧರ ವೈದ್ಯ ಅವರು ಶಿರಸಿ ನಗರದ ಹಲವು ಮನೆಗಳಲ್ಲಿ ಹೂವಿನಕೋಲು ಆಟಗಳನ್ನು ಮಾಡಿದ್ದರು. ಆಸಕ್ತ ಜನರ ಮನೆಯ ಜಗುಲಿಯೇ ಇದಕ್ಕೆ ವೇದಿಕೆಯಾದರೆ, ಮನೆಯ ಹಾಗೂ ಸುತ್ತಲ ಓಣಿಯ ಜನರೇ ಕಲೆಯ ವೀಕ್ಷಕರಾಗಿದ್ದರು. ವಿಶೇಷವಾಗಿ ಆಸಕ್ತ ಮಕ್ಕಳಿಗೆ ಕಲೆಯ ತರಬೇತಿ ನೀಡಿ, ಹೂವಿನಕೋಲು ಕಲೆಯನ್ನು ಪ್ರಸ್ತುತಪಡಿಸಿದ್ದು, ಈ ಕಲೆಯ ಬೆಳವಣಿಗೆಗೂ ಸಹಕಾರಿ ಎನ್ನಬಹುದು. ಹೂವಿನ ಕೋಲು ಆಟ ಮಾಡಿಸಿದರೆ ಮನೆಯೊಳಗಿನ ದುಷ್ಟಶಕ್ತಿಗಳು ದೂರ ಹೋಗುತ್ತವೆ ಎನ್ನುವ ನಂಬಿಕೆಯೂ ಇದೆ. ತಾಳಮದ್ದಲೆಯಂತೆ ಭಾಗವತಿಕೆ, ಹಿನ್ನೆಲೆ ಸಂಗೀತವಾಗಿ ಮೃದಂಗ ವಾದನ ಇರುತ್ತದೆ. ಜೊತೆಗೆ, ಅಲಂಕರಿಸಿದ ಕೋಲನ್ನು ಕುಳಿತಲ್ಲೆ ಪರಸ್ಪರ ಹೊಡೆಯುತ್ತ ಭಾಗವತರ ಹಾಡಿಗೆ ಕೋಲಿನ ತಾಳದ ಸದ್ದು ಜೋಡಿಸುವುದು ವೀಕ್ಷಕರಿಗೆ ಮನರಂಜನೆಯನ್ನೂ ನೀಡುತ್ತದೆ.

–ಜಿ.ಎಂ. ಬೊಮ್ನಳ್ಳಿ

